ಪ್ರಥಮ ದರ್ಜೆಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ ಹಾನಗಲ್

**ಸಿ. ಸಿ. ನಂ.1190/2024.**

| | | | | |
|---|---|---|---|---|
| ಸಾಕ್ಷಿಧಾರರ ಹೆಸರು | : | ಮಾರ್ತಂಡಗೌಡ ಪಾಟೀಲ | ಪಿಡಬ್ಲ್ಯೂ | 01 |
| ತಂದೆ:ಗಂಡನ ಹೆಸರು | : | ಸಿದ್ದನಗೌಡ | ಸಿಡಬ್ಲ್ಯೂ | 02 |
| ವಯಸ್ಸು | : | 47 ವರ್ಷ | | |
| ಉದ್ಯೋಗ | : | ವ್ಯವಸಾಯ | | |
| ವಾಸಸ್ಥಳ | : | ನಿಟಗಿನಕೊಪ್ಪ ತಾಃ ಹಾನಗಲ್ | | |

ದಿನಾಂಕ **11.02.2025** ರಂದು ಸಾಕ್ಷಿಧಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆಃ ಸಹಾಯಕ ಸರಕಾರಿ ಅಭಿಯೋಜಕರಿಂದ

ಚಾಸಾ-3 ಗೊತ್ತು. ಸಾಕ್ಷಿ ತನ್ನ ಸಹಿಯನ್ನು ಪಂಚನಾಮೆಯಲ್ಲಿ ನೋಡಿ ಗುರುತಿಸಿದ್ದು ಪಂಚನಾಮೆಯನ್ನು ನಿಪಿ-1 ಎಂದು, ಸಾಕ್ಷಿಯ ಸಹಿಯನ್ನು ನಿಪಿ-1 ಎ ಎಂದು ಗುರುತಿಸಲಾಯಿತು. ಪಂಚನಾಮೆಯಲ್ಲಿ ಬರೆದ ವಿಷಯ ಗೊತ್ತಿಲ್ಲ. ಪೋಲಿಸರ ಕೋರಿಕೆ ಮೇರೆಗೆ ಸಹಿ ಮಾಡಿದ್ದೇನೆ. ಅದೇ ಕಾಲಕ್ಕೆ ಶೋಧನಾ ಸಮುಚ್ಚಿತ ವರದಿಗೆ ಚಾಸಾ-1 ರವರು ಸಹಿ ಪಡೆದಿದ್ದರು. ಅದನ್ನು ನಿಪಿ-2 ಎಂದು ಸಾಕ್ಷಿ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಮುದ್ದೆಮಾಲಿನ ಮೇಲೆ ಅಂಟಿಸಿದ ಚೀಟಿಯನ್ನು ಗುರುತಿಸಿದ್ದು ಅದನ್ನು ಮು.ಮಾ-1 ಎಂದು ಗುರುತಿಸಲಾಯಿತು. ಆರೋಪಿಯನ್ನು ನೋಡಿರುವುದಿಲ್ಲ.

**(**ಈ ಹಂತದಲ್ಲಿ ಸಹಾಯಕ ಸರಕಾರಿ ಅಭಿಯೋಜಕರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು**)**

**:** ಪಾಟೀ ಸವಾಲು **:** ಸಹಾಯಕ ಸರಕಾರಿ ಅಭಿಯೋಜಕರಿಂದ

ದಿನಾಂಕಃ 10.04.2024 ರಂದು ಚಾಸಾ-1 ರವರು ನನ್ನ ಮತ್ತು ಚಾಸಾ-3 ರವರ ಸಮಕ್ಷಮ ನಿಟಗಿನಕೊಪ್ಪ ಗ್ರಾಮದಲ್ಲಿರುವ ಆರೋಪಿಯ ಮನೆಯ ಮೇಲೆ ದಾಳಿ ಮಾಡಿ ಸೋಪಾ ಸೆಟ್ ಕೆಳಗಡೆ ಇದ್ದ ಹಳದಿ ಬಣ್ಣದ ಗೊಬ್ಬರಚೀಲದಲ್ಲಿ ಇಟ್ಟಿದ್ದ 90 ಎಂ ಎಲ್ ನ 120 ಓರಿಜಿನಲ್ ಚಾಯ್ಸ ವಿಸ್ಕಿಯ ಪೌಚುಗಳನ್ನು ಜಪ್ತಿಪಡಿಸಿಕೊಂಡು ಪಂಚನಾಮೆಯನ್ನು ರಾತ್ರಿ 8.30 ರಿಂದ 9.30 ಗಂಟೆಯವರೆಗೆ ಮಾಡಿ ರಾಸಾಯನಿಕ ಪರೀಕ್ಷೆಗೆ ಅಂತಾ ಮಾದರಿ ಪೌಚುಗಳನ್ನು

ಪಡೆದುಕೊಂಡರು ಎಂದರೆ ಸರಿಯಲ್ಲ. ನಿಪಿ-1 ರ ಕಾಲಕ್ಕೆ ಹಾಜರಿದ್ದು ವಿಷಯ ತಿಳಿದು ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ರ ವಿಷಯ ಗೊತ್ತಿದ್ದರೂ ಸಹ ಇಲ್ಲ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಮು.ಮಾ-1 ನ್ನು ಆರೋಪಿ ಕಡೆಯಿಂದ ವಶಪಡಿಸಿಕೊಂಡು ತಂದರೂ ಸಹ ಇಲ್ಲ ಅಂತಾ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿಗೆ ಸಹಾಯವಾಗಲಿ ಎಂದು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ಶ್ರೀ ಎಸ್ ಎಂ ಯು ವಕೀಲರಿಂದಃ

**(**ಆರೋಪಿ ಪರ ವಕೀಲರು ಈ ಸಾಕ್ಷಿಧಾರರ ಪಾಟೀ ಸವಾಲು ಏನೂ ಇಲ್ಲ ಅಂತಾ ನಿವೇದಿಸಿಕೊಂಡಿರುತ್ತಾರೆ **)**

**:** ಮರುವಿಚಾರಣೆ **:** ಇಲ್ಲ**.**

**(** ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು**)**

ನ**.** ಸ**.** ಓ**.** ಹೇ**.** ಕೆ ಸರಿ ಇದೆ
ಎಂದು ಒಪ್ಪಿರುತ್ತಾರೆ**.**

**Sd/-**

ಹಿರಿಯ ಸಿವಿಲ್ ನ್ಯಾಯಾಧೀಶರು
ಹಾನಗಲ್